ಶ್ರೀ ರಾಜಾ ಅಮರೇಶ ನಾಯಕ್ (ಧಾರ್ಮಿಕ ದತ್ತಿ ರಾಜ್ಯ ಸಚಿವರು):-

ಅ) ೭ ಛತ್ರಗಳು

ಆ) ಖಾಸಗಿ ಛತ್ರಗಳು ಈ ಇಲಾಖೆಯ ನಿಯಂತ್ರಣಕ್ಕೆ ಬರುವುದಿಲ್ಲ. ಆದರಿಂದಾಗಿ ಅವುಗಳ ಮಾಹಿತಿ ಇಲಾಖೆಯಲ್ಲಿ ಲಭ್ಯ ಇರುವುದಿಲ್ಲ

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅರಣ್ಯ ಇಲಾಖೆಯವರು ವಶಪಡಿಸಿಕೊಂಡಿರುವ ಗಂಧದ ಮರಗಳು.

೧೩೦೬(೧೮೨೨)ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ):- ಮಾನ್ಯ ರಾಜ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ೧೯೯೦-೯೧ ಮತ್ತು ೧೯೯೨ನೇ ಡಿಸೆಂಬರ್ ಅಖೈರುವರೆಗೆ ದಕ್ಷಿಣ ಕನ್ನಡದಲ್ಲಿ ಅರಣ್ಯ ಇಲಾಖೆಯವರು ವಶಪಡಿಸಿಕೊಂಡ ಕಳ್ಳ ಸಾಗಾಣಿಕೆಯ ಗಂಧ ಎಷ್ಟು? ಹಾಗೂ ಇದರ ಒಟ್ಟು ಬೆಲೆ ಎಷ್ಟು? (ತಾಲ್ಲೂಕುವಾರು ವಿವರ ನೀಡುವುದು).

ಆ) ಎಷ್ಟು ಪ್ರಕರಣಗಳು ಗಂಧ ಸಾಗಾಣಿಕೆಯಲ್ಲಿ ಈ ಅವಧಿಯಲ್ಲಿ ಆಗಿದೆ? ಎಷ್ಟು ಜನರಿಗೆ ಶಿಕ್ಷೆ ಹಾಗೂ ದಂಡ ವಿಧಿಸಲಾಗಿದೆ?

ಶ್ರೀ ಈಟಿ ಶಂಭುನಾಥ್ (ರಾಜ್ಯ ಅರಣ್ಯ ಸಚಿವರು):-

ಅ) ೧೯೯೦-೯೧ ಮತ್ತು ೧೯೯೧-೯೨ (ಡಿಸಂಬರ್ ೯೧ರ ಅಂತ್ಯದವರೆಗೆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಶಪಡಿಸಿಕೊಂಡ ಶ್ರೀಗಂಧದ ಪ್ರಮಾಣ ಮತ್ತು ಬಲೆ ಈ ರೀತಿ ಇದೆ.

	೧೯೯೦-೯೧		೧೯೯೧-೯೨ (ಡಿಸೆಂಬರ್ ೯೧ರವರೆಗೆ)	
ತಾಲ್ಲೂಕು	ಶ್ರೀಗಂಧ ಪ್ರಮಾಣ	ಬೆಲೆ ರೂ. ಲಕ್ಷಗಳಲ್ಲಿ	ಶ್ರೀಗಂಧ ಪ್ರಮಾಣ	ಬೆಲೆ ರೂ. ಲಕ್ಷಗಳಲ್ಲಿ
೧) ಮಂಗಳೂರು	೨.೦೦೦	೩.೦೦	-	-
೨) ಪುತ್ತೂರು	೫.೦೦೦	೭.೫೦	೦.೩	೦.೪೫
೩) ಸುಳ್ಯ	೭.೦೦೦	೧೦.೫೦	-	-
೪) ಬೆಳ್ತಂಗಡಿ	೩.೦೦೦	೪.೫೦	೦.೭೦೦	೧.೦೫
೫) ಕಾರ್ಕಳ	೩.೦೦೦	೪.೫೦	೪.೦೦೦	೬.೦೦೦
೬) ಕುಂದಾಪುರ	೧.೦೦೦	೧.೫೦	೦.೬೦೦	೦.೯೦
೭) ಉಡುಪಿ	೦.೬೦೦	೦.೯೦	೨.೬೦೦	೩.೯೦

ವಿವರ ಈ ರೀತಿ ಇದೆ

ತಾಲ್ಲೂಕು	೧೯೯೦-೯೧	೧೯೯೧-೯೨ (ಡಿಸೆಂಬರ್ ೯೧ರ ವರೆಗೆ)
೧) ಮಂಗಳೂರು	೨೧	-
೨) ಮುತ್ತೂರು	೧೩	೨೭
೩) ಸುಳ್ಯ	೮	-
೪) ಬೆಳ್ತಂಗಡಿ	೨೮	೩೨
೫) ಕಾರ್ಕಳ	೩೩	೧೦
೬) ಕುಂದಾಪುರ	೨೩	೯
೭) ಉಡುಪಿ	೧೪	೩

ಮೇಲಿನ ಪ್ರಕರಣಗಳು ನ್ಯಾಯಾಲಯಗಳಲ್ಲಿ ವಿಚಾರಣೆಯ ವಿವಿಧ ಹಂತಗಳಲ್ಲಿರುವುದರಿಂದ ಇನ್ನೂ ಯಾರಿಗೂ ಶಿಕ್ಷೆ ವಿಧಿಸಿರುವುದಿಲ್ಲ.

ಸ್ಟಾಂಪ್ ವೆಂಡಾರ್ಸ್‌ಗೆ ಸ್ಟಾಂಪ್ ಕೋಟಾವನ್ನು ಹೆಚ್ಚಿಸುವ ಬಗ್ಗೆ

೧೩೦೯(೧೪೨೩)ಶ್ರೀ ರಾಮಲಿಂಗರೆಡ್ಡಿ:- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರವಿಸುರೇ?

ಅ) ರಾಜ್ಯದಲ್ಲಿ ಎಷ್ಟು ಮೈದಿ ಮುದ್ರಾಂಕ ಮಾರಾಟಗಾರರು (ಸ್ಟಾಂಪ್ ವೇಂಡಾರ್ಸ್) ಇದ್ದಾರೆ?

ಆ) ಮುದ್ರಾಂಕ ಮಾರಾಟಗಾರರಿಗೆ ಕನಿಷ್ಠ ಎಷ್ಟು ಮೊತ್ತದ ಸ್ಟಾಂಪ್ ಪೇಪರ್ ಮಾರಾಟಮಾಡಲು ಅವಕಾಶವಿದೆ?

ಇ) ರೂ. ೧೦೦೦೦ ಕ್ಕಿಂತ ಹೆಚ್ಚಿನ ಮೊತ್ತದ ಸ್ಟಾಂಪ್ ಪೇಪರ್ ಅನ್ನು ಕೊಳ್ಳಲು ಸಾರ್ವಜನಿಕರು ಬಾರ್ ಕೌನ್ಸಿಲ್ ಅನ್ನು ಸಂಪರ್ಕಿಸಬೇಕಾಗಿರುವುದು ನಿಜವೇ?

ಈ) ಸರ್ಕಾರವು ಸ್ಟಾಂಪ್ ವೆಂಡಾರ್ಸ್‌ಗೆ ಮಾರಾಟದ ಮಿತಿಯನ್ನು ರೂ. ೨೫೦೦೦-೦೦ ಗಳಿಗೆ ಹೆಚ್ಚಿಸುವುದರಿಂದ ಸಾರ್ವಜನಿಕರಿಗೆ ಸಹಾಯವಾಗುತ್ತದೆಯೇ

ಶ್ರೀ ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):-

ಅ) ೨,೬೨೬

ಆ) 'ಎ' ದರ್ಜೆ ಮಾರಾಟಗಾರರು ರೂ. ೧೦,೦೦೦-೦೦

'ಬಿ'ದರ್ಜೆ ಮಾರಟಗಾರರು ರೂ. ೫,೦೦೦-೦೦

ಇ) ಲೀಗಲ್ ಬಾರ್ ಅಸೋಷಿಯೇಷ್‌ರವರು ಒಂದು ವ್ಯವಹಾರಕ್ಕೆ ೫೦೦೦೦-೦೦ ರೂ. ಗಳವರೆಗಿನ ಸ್ಟಾಂಪ್ ನೀಡಬಹುದು. ಇದು ಮಾತ್ರವಲ್ಲದೆ ಖಜಾನೆಗಳಿಂದಲೂ ಪಡೆಯಬಹುದು.